ಈಗಾಗಲೇ ಎರಡು ಮಧ್ಯಮ ದರ್ಜೆಯ ಕೈಗಾರಿಕೆಗಳು ಸದರಿ ಪ್ರದೇಶದಲ್ಲಿ ಸ್ಥಾಪನೆಗೊಂಡಿದ್ದು, ಮತ್ತೊಂದು ಮಧ್ಯಮ ದರ್ಜೆಯ ಕೈಗಾರಿಕಾ ಘಟಕವು ಸ್ಥಾಪನೆ ಹಂತದಲ್ಲಿದೆ. ಇದಲ್ಲದೆ ಎರಡು ಸಣ್ಣ ಪ್ರಮಾಣದ ಕೈಗಾರಿಕೆಗಳು ಸಹ ಸ್ಥಾಪನೆ ಹಂತದಲ್ಲಿದೆ.

(ಇ) ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್‌ಗಳಿಗೆ ಸುಮಾರು ೧೦೦ ಎಕರೆ ಜಮೀನನ್ನು ಮಿಸಲಿಡಲಾಗಿದೆ, ಮತ್ತು ಸುಮಾರು ೨೦೦ ಎಕರೆ ಜಮೀನನ್ನು ಹೈ ಟೆಕ್ನಿಕ್ ಇಂಡಸ್ಟ್ರೀಸ್ ಕೈಗಾರಿಕೆಗಳಿಗಾಗಿ ಕಾಯ್ದಿರಿಸಲಾಗಿದೆ.

ರಾಜ್ಯದಲ್ಲಿರುವ ಅಂಗವಿಕಲ ಕಲ್ಯಾಣಕ್ಕಾಗಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ

೬೬೦ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಸಮಾಜ ಕಲ್ಯಾಣ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ರಾಜ್ಯದಲ್ಲಿರುವ ಅಂಗವಿಕಲರ ಸಂಖ್ಯೆ ಎಷ್ಟು ? ಈ ಪೈಕಿ ಎಷ್ಟು ಅಂಗವಿಕಲರು ಪ್ರತಿ ತಿಂಗಳು ಮಾಶಾಸನ (ಪಿ.ಎಚ್.ಪಿ.) ಪಡೆಯುತ್ತಿದ್ದಾರೆ ? (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಅಂಗವಿಕಲರ ಕಲ್ಯಾಣಕ್ಕಾಗಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಯಿತು ಹಾಗೂ ಇದಕ್ಕಾಗಿ ವೆಚ್ಚವಾದ ಹಣವೆಷ್ಟು

(ಇ) ಈ ವರ್ಷ ಅಂಗವಿಕಲರ ಕಲ್ಯಾಣಕ್ಕಾಗಿ ಸರ್ಕಾರವು ರೂಪಿಸಿದ್ದ ಯೋಜನೆಗಳೇನು ?

(ಈ) ವಯೋಮಿತಿ ಮೀರಿದ ಅಂಗವಿಕಲರಿಗೆ ಸರ್ಕಾರ ಉದ್ಯೋಗಕ್ಕಾಗಿ ವಯೋಮಿತಿಯನ್ನು ಮತ್ತಷ್ಟು ಹೆಚ್ಚಿಸಲು ಸರ್ಕಾರ ಯೋಜಿಸಿದೆಯೇ ?

(ಉ) ಇಲ್ಲದಿದ್ದರೆ ಕಾರಣಗಳೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು, ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು) (ಸಮಾಜ ಕಲ್ಯಾಣ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳ ಪರವಾಗಿ).—

(ಅ) ರಾಜ್ಯದಲ್ಲಿರುವ ಅಂಗವಿಕಲರ ನಿಖರವಾದ ಸಂಖ್ಯೆ ಲಭ್ಯವಿರುವುದಿಲ್ಲ.

೨,೧೧,೯೩೪ ಅಂಗವಿಕಲರು ಮಾಶಾಸನ ಪಡೆಯುತ್ತಿದ್ದಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ—Iರಲ್ಲಿ ನೋಡಬಹುದು.

(ಆ) ಅಂಗವಿಕಲರ ಸಮಿಕ್ಷೆ (ಆಯವ್ಯಯವನ್ನು ೧೯೯೦–೯೧ನೇ ಸಾಲಿನಲ್ಲಿ ಒದಗಿಸಿದೆ) ರೂ. ೧೫,೦೦,೦೦೦.೦೦

(೨) ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್, ಮೈಸೂರು ರೂ. ೩,೯೮,೨೦೫.೦೦

ಈ ಯೋಜನೆಗಳಲ್ಲದೆ ಇನ್ನೂ ಅನೇಕ ಯೋಜನೆಗಳನ್ನು ಈ ಇಲಾಖೆಯು ಹಮ್ಮಿಕೊಂಡಿದೆ. ಅದನ್ನು ಅನುಬಂಧ—IIರಲ್ಲಿ ನೋಡಬಹುದು.

(ಇ) ೧೯೯೦–೯೧ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಯೋಜಿಸಲಾಗಿದೆ.

(೧) ಅಂಗವಿಕಲರ ಸಮೀಕ್ಷೆ

(೨) ಉದ್ಯೋಗಸ್ಥ ಅಂಗವಿಕಲ ಮತ್ತು ತರಬೇತಿದಾರರಿಗೆ ಎರಡು ವಸತಿ ನಿಲಯಗಳು.

(೩) ಅಂದರಿಗಾಗಿ ಒಂದು ಕೈಗಾರಿಕಾ ತರಬೇತಿ ಕೇಂದ್ರವನ್ನು ಗುಲ್ಬರ್ಗಾದಲ್ಲಿ ತೆರೆಯುವುದು.

(೪) ಕಿವುಡು ಮತ್ತು ಅಂದ ಮಕ್ಕಳಿಗೆ ಬೆಂಗಳೂರಿನಲ್ಲಿ ಎರಡು ವಿಶೇಷ ಶಾಲೆಗಳು.

(೫) ದಾವಣಗೆರೆಯಲ್ಲಿ ಅಂದರ ಶಾಲೆಯ ಹೊಸ ಕಟ್ಟಡ ನಿರ್ಮಾಣ.

(ಈ) ಇಲ್ಲ.

(ಉ) ಸಾಮಾನ್ಯ ಜನರಿಗಿರುವ ವಯೋಮಿತಿಗಿಂತ ಅಂಗವಿಕಲರಿಗೆ ಈಗಾಗಲೇ ೧೦ ವರ್ಷಗಳ ರಿಯಾಯಿತಿ ಇರುತ್ತದೆ.

ಅನುಬಂಧ–I

ಅಂಗವಿಕಲ ಪುನಶ್ಚೇತನದ ಜಿಲ್ಲಾವಾರು ಮಾಹಿತಿ

ಕ್ರ. ಸಂ.	ಜಿಲ್ಲೆಯ ಹೆಸರು	ಫಲಾನುಭವಿಗಳ ಸಂಖ್ಯೆ
೧.	ಬೆಂಗಳೂರು (ನಗರ)	೧೦,೫೦೫
೨.	ಬೆಂಗಳೂರು (ಗ್ರಾಮಾಂತರ)	೧೦,೬೮೩
೩.	ಬಳ್ಳಾರಿ	೭,೨೫೩
೪.	ಬೀದರ್	೬,೫೭೯
೫.	ಬೆಳಗಾಂ	೧೭,೩೫೦
೬.	ಬಿಜಾಪುರ	೧೪,೦೧೪
೭.	ಚಿತ್ರದುರ್ಗ	೧೨,೯೫೦
೮.	ಚಿಕ್ಕಮಗಳೂರು	೫,೨೭೬
೯.	ಧಾರವಾಡ	೭,೪೫೮
೧೦.	ಗುಲ್ಬರ್ಗಾ	೧೧,೦೨೩
೧೧.	ಹಾಸನ	೧೧,೩೯೦
೧೨.	ಕೋಲಾರ	೧೫,೨೩೫
೧೩.	ಮೈಸೂರು	೨೦,೧೧೮
೧೪.	ಮಂಡ್ಯ	೨,೦೬೨
೧೫.	ಕೊಡಗು	೨,೫೦೬
೧೬.	ದಕ್ಷಿಣ ಕನ್ನಡ (ಮಂಗಳೂರು)	೧೪,೩೦೩
೧೭.	ತುಮಕೂರು	೧೬,೧೬೧
೧೮.	ಕಾರವಾರ (ಉತ್ತರ ಕನ್ನಡ)	೬,೬೧೩
೧೯.	ರಾಯಚೂರು	೮,೭೨೫
೨೦.	ಶಿವಮೊಗ್ಗ	೧೧,೭೨೬
	ಒಟ್ಟು	೨,೧೧,೯೩೪

ಅನುಬಂಧ—II

ಕ್ರ. ಸಂ.	ಕಾರ್ಯಗತಗೊಳಿಸಿದ ಯೋಜನೆಗಳು	
೧.	ನಿರ್ದೇಶನ ಮತ್ತು ಆಡಳಿತ	ಈ ಎಲ್ಲಾ ಯೋಜನೆಗಳಿಗೆ
೨.	ಸಮಾಜ ಸೇವೆ ಸಂಕೀರ್ಣ	ರೂ. ೧೫,೦೪,೬೮,೭೫೩.೦೦
೩.	ಅಂಗವಿಕಲರಿಗೆ ಸರ್ಕಾರೇತರ ಸಂಘಗಳು	ಗಳನ್ನು ವೆಚ್ಚ ಮಾಡಲಾಗಿದೆ.
೪.	ಕಿವುಡರ ಅಭಿವೃದ್ಧಿ ಶಾಲೆ	
೫.	ಅಂಗವಿಕಲರ ವಿದ್ಯಾರ್ಥಿ ವೇತನ (ಕೇಂದ್ರ)	
೬.	ಸೀಡ್ ಮನೀ ಸ್ಕೀಮ್ ಫಾರ್ ಡಿಸೇಬಲ್ಡ್ ಎಂಟರ್‌ಪ್ರೆನ್ಯೂರ್ಸ್	
೭.	ಅಂಗವಿಕಲರಿಗಾಗಿ ಅಂಗವಿಕಲರ (ರಾಜ್ಯ) ವಿದ್ಯಾರ್ಥಿ ವೇತನ ಮತ್ತು ಹಣಕಾಸು ಸಹಾಯ	
೮.	ಅಂಗವಿಕಲರು ಮತ್ತು ಬುದ್ಧಿ ಮಾಂದ್ಯರ ಪುನರ್ವಸತಿ ಯೋಜನೆಯಲ್ಲಿ ಶಿಕ್ಷಣ ಮತ್ತು ತರಬೇತಿ	
೯.	ದೈಹಿಕ ಅಂಗವಿಕಲರಿಗೆ ಮತ್ತು ಬಡ ಅಂಗವಿಕಲರಿಗೆ ಆರ್ಥಿಕ ಸಹಾಯ	
೧೦.	ದುಡಿಯುವ ಅಂಗವಿಕಲ ಪುರುಷರ ಮತ್ತು ಮಹಿಳೆಯರ ವಸತಿ ನಿಲಯ	
೧೧.	ಬ್ರೈಲ್ ಮುದ್ರಣಾಲಯ	
೧೨.	ಅಂಗವಿಕಲ ಕಲ್ಯಾಣ (ಕಟ್ಟಡಗಳು)	